ಆ ಸಾಲಿನಿಂದ ಈ ಕೇಂದ್ರಕ್ಕೆ ಯಾವುದೇ ಖರ್ಚು ಮಾಡಿರುವುದಿಲ್ಲ ಮತ್ತು ಆದಾಯವೂ ಸಹ ಬಂದಿರುವುದಿಲ್ಲ.

5427(6193) ಶ್ರೀ ಶಶಿಕಾಂತ್ ಅಕ್ಕಪ್ಪನಾಯಕ (ಹುಕ್ಕೇರಿ) : ಮಾನ್ಯ ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹಿಡಕಲ್ ಅಣೆಕಟ್ಟಿನ ಟೆಂಡರ್ ಕರೆದಿರುವ ಹೊಸ ಕಾಲುವೆ ತೋಡುವ ಯೋಜನೆಗಳಿಗೆ ಜಮೀನುಗಳನ್ನು ವಶಪಡಿಸಿಕೊಳ್ಳಲಾಗಿದೆಯೇ; ಜಮೀನುಗಳನ್ನು ವಶಪಡಿಸಿಕೊಳ್ಳುವಾಗ ನೋಟೀಸ್‌ಗಳನ್ನು ನೀಡಲಾಗಿದೆಯೇ?

ಆ) ಹಾಗಿದ್ದಲ್ಲಿ ವಶಪಡಿಸಿಕೊಂಡಿರುವ ಜಮೀನು ಎಷ್ಟು? ವಶಪಡಿಸಿಕೊಳ್ಳದಿದ್ದಲ್ಲಿ ಯಾವಾಗ ವಶಪಡಿಸಿಕೊಳ್ಳಲಾಗುವುದು;

ಇ) ಹಿಡಕಲ್ ಅಣೆಕಟ್ಟಿನ ಎಸ್.ಎಲ್.ಬಿ. ಕಛೇರಿಯಲ್ಲಿ ಪರಿಹಾರ ವಿತರಣೆಗೆ ಬಾಕಿ ಇರುವ ಪ್ರಕರಣಗಳು ಎಷ್ಟು; ಒಟ್ಟು ಬಾಕಿ ನೀಡಬೇಕಾಗಿರುವ ಹಣ ಎಷ್ಟು;

ಈ) ರೈತರಿಗೆ ಜಮೀನು ನೀಡಬೇಕಾಗಿರುವ ಬಾಕಿ ಹಣವನ್ನು ನೀಡುವಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಉ) ಹಿಡಕಲ್ ಅಣೆಕಟ್ಟೆಯ ಎಸ್.ಎಲ್.ಬಿ ಕಛೇರಿ ಮೇಲಿಂದ ಮೇಲೆ ಜಪ್ತಿ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಕಾರಣಗಳೇನು;

ಊ) ಈ ಯೋಜನೆಯ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; ವಿಳಂಬಕ್ಕೆ ಕಾರಣಗಳೇನು;

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು) :

ಅ) ಸದರಿ ಕಾಮಗಾರಿಗಳಿಗೆ ಬೇಕಾಗುವ ಜಮೀನನ್ನು ಭಾಗಶಃ ವಶಪಡಿಸಿಕೊಳ್ಳಲಾಗಿದೆ. ಈ ಜಮೀನುಗಳನ್ನು ಸ್ವಾಧೀನಪಡಿಸಿಕೊಳ್ಳಲು ಪ್ರಸ್ತಾವನೆ ಸಲ್ಲಿಸಲಾಗುತ್ತಿದ್ದು, ಸದ್ಯದಲ್ಲಿಯೇ 4(1) ಅಧಿಸೂಚನೆ ಹೊರಡಿಸಲಾಗುವುದು.

ಆ) 10ಎ–11ಗುಂ ಜಮೀನನ್ನು ವಶಪಡಿಸಿಕೊಳ್ಳಲಾಗಿದೆ. ಉಳಿದ ಜಮೀನಿನ ಭೂಸ್ವಾಧೀನ ಪ್ರಕ್ರಿಯೆ ಪ್ರಗತಿಯಲ್ಲಿದ್ದು ಡಿಸೆಂಬರ್ 2006ರ ಒಳಗೆ ಜಮೀನುಗಳನ್ನು ವಶಪಡಿಸೊಳ್ಳಲಾಗುವುದು.

ಇ) 1) ಒಟ್ಟು 155 ಐತೀರ್ಪು ಪ್ರಕರಣಗಳಲ್ಲಿ ರೂ. 419.95 ಲಕ್ಷ.

2) ಒಟ್ಟು 477 ನ್ಯಾಯಾಲಯ ಪ್ರಕರಣಗಳಲ್ಲಿ ರೂ. 527.00 ಲಕ್ಷ.

ಈ) **ಐತೀರ್ಪು ಪ್ರಕರಣಗಳಲ್ಲಿ:**

1) ಭೂಸ್ವಾಧೀನ ಕಾಯ್ದೆ ಕಲಂ 12(2) ನೋಟೀಸ್ ಜಾರಿ ಮಾಡಲಾಗಿದೆ.

2) ಪರಿಹಾರಧನ ಪಡೆಯಲು ತಕರಾರು ಇದ್ದ ಪ್ರಕರಣಗಳಲ್ಲಿ ಪರಿಹಾರಧನವನ್ನು ಭೂಸ್ವಾಧೀನ ಕಾಯ್ದೆ ಕಲಂ 30 ರನ್ವಯ ಕೆಲವು ಪ್ರಕರಣಗಳಲ್ಲಿ ಸಂಬಂಧಿಸಿದ ಕೋರ್ಟಿಗೆ ಭರಣಾ ಮಾಡಲಾಗಿದೆ.

ನ್ಯಾಯಾಲಯ ಪ್ರಕರಣಗಳಲ್ಲಿ:

ಬಾಕಿ ಇದ್ದ ಪ್ರಕರಣಗಳನ್ನು ಮರು ಪರಿಶೀಲಿಸಿ ಅರ್ಹ ಪ್ರಕರಣಗಳಲ್ಲಿ ಹಾಗೂ ಹೊಸದಾಗಿ ನ್ಯಾಯಾಲಯದಲ್ಲಿ ನಿರ್ಣಯವಾದ ಪ್ರಕರಣಗಳಲ್ಲಿ ಇ.ಪಿ. ಲೆಕ್ಕಾಚಾರ ಮಾಡಿ ಕೋರ್ಟಿಗೆ ಹಣ

ಭರಣ ಮಾಡಲಾಗುತ್ತಿದೆ. ಹಾಗೂ ಇ.ಪಿ.ಗಳನ್ನು ಮುಕ್ತಾಯ ಮಾಡಿಸಲು ಸರಕಾರಿ ವಕೀಲರು/ನಿಗಮದ ವಕೀಲರ ಮುಖಾಂತರ ಕ್ರಮ ಜರುಗಿಸಲಾಗುತ್ತಿದೆ.

ಊ) ಬಂದಿದೆ.

ಸದರಿ ಕಛೇರಿಯ ಜಪ್ತಿಗೆ ಮುಖ್ಯ ಕಾರಣಗಳು ಈ ಕೆಳಕಂಡಂತಿವೆ:

1. ಈಗಾಗಲೇ ನ್ಯಾಯಾಲಯಕ್ಕೆ ಹಣ ಭರಣವಾದ ಇ.ಪಿ. ಪ್ರಕರಣಗಳಲ್ಲಿ ಸದರೀ ಭರಣವಾದ ಮೊತ್ತವನ್ನು ಕಡಿಮೆಯೆಂದು ನ್ಯಾಯಾಲಯವು ಪರಿಗಣಿಸಿದ್ದರಿಂದ ಪುನಃ ಜಪ್ತಿ ವಾರಂಟ್ ಆದೇಶಗಳು ಜಾರಿಯಾಗಿವೆ.

2. ನ್ಯಾಯಾಲಯಗಳ ತೀರ್ಪುಗಳ ಕುರಿತು ಕಾನೂನು ಇಲಾಖೆಯ ಪರಿಶೀಲನೆಯಲ್ಲಿದ್ದು, ಅದರ ಅಭಿಪ್ರಾಯ ನಿರೀಕ್ಷಣೆಯಲ್ಲಿರುವುದರಿಂದ.

ಋ) ಘಟಪ್ರಭಾ ಯೋಜನೆಯನ್ನು ಡಿಸೆಂಬರ್ 2006ರ ಒಳಗಾಗಿ ಪೂರ್ಣಗೊಳಿಸಲು ಯೋಜಿಸಲಾಗಿದೆ. ಯೋಜನೆಯ ಅಂಗವಾದ ರುಸ್ತುಂಪೂರ ಏತ ನೀರಾವರಿ ಯೋಜನೆಗಾಗಿ 2005–06ನೇ ಸಾಲಿಗಾಗಿ ರೂ. 487.97 ಲಕ್ಷ ಅನುದಾನ ಕಲ್ಪಿಸಲಾಗಿದ್ದು, ಇದನ್ನು ಡಿಸೆಂಬರ್ 2005ರ ಒಳಗಾಗಿ ಪೂರ್ಣಗೊಳಿಸಲು ಯೋಚಿಸಲಾಗಿದೆ.

ವಿದ್ಯುತ್ ಸಂಪರ್ಕ ನೀಡುವಲ್ಲಿನ ವಿಳಂಬ ಹಾಗೂ ರೇಲ್ವೆ ಕ್ರಾಸಿಂಗ್ ಕಾಮಗಾರಿಯನ್ನು ರೇಲ್ವೆ ಇಲಾಖೆಯವರು ಮಾಡಬೇಕಾಗಿದ್ದರಿಂದ, ಸದರಿ ಕಾಮಗಾರಿಯಲ್ಲಿ ಸ್ವಲ್ಪ ವಿಳಂಬವಾಗಿದ್ದು ಈ ಕಾಮಗಾರಿಯು ಈಗ ಪೂರ್ಣಗೊಂಡಿದೆ.

5428(6036) ಶ್ರೀ ಶಿವಾನಂದ ನಾಯ್ಕ (ಭಟ್ಕಳ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹೊನ್ನಾವರಕ್ಕೆ ಅಗ್ನಿಶಾಮಕ ಠಾಣೆ ಪ್ರಾರಂಭಿಸಲು ಸರ್ಕಾರ ಉದ್ದೇಶಿಸಿದೆಯೇ:

ಆ) ಹೊನ್ನಾವರ ತಾಲ್ಲೂಕಿನ ಕೇಂದ್ರ ಬಿಂದುವಾದ ಹೊನ್ನಾವರದಲ್ಲಿ ಅಗ್ನಿಶಾಮಕ ಠಾಣೆ ಪ್ರಾರಂಭಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ.

ಇ) ಯಾವ ಭಾಗದಲ್ಲಿ ಪ್ರಾರಂಭಿಸಲು ಸರ್ಕಾರ ಜಮೀನು ಕಾಯ್ದಿರಿಸಿದೆ:

ಈ) ಮಂಜೂರು ಮಾಡಿರುವ ಸಿಬ್ಬಂದಿಗಳ ವಿವರ ಒದಗಿಸುವುದು:

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) :

ಅ,ಆ) ಉತ್ತರ ಕನ್ನಡ ಜಿಲ್ಲೆಯ ಕಾರವಾರ, ಭಟ್ಕಳ, ಶಿರಸಿಯಲ್ಲಿ ಅಗ್ನಿಶಾಮಕ ಠಾಣೆಗಳು ಕಾರ್ಯನಿರ್ವಹಿಸುತ್ತವೆ. ಕುಮಟಾದಲ್ಲಿ ಅಗ್ನಿಶಾಮಕ ಠಾಣೆಯನ್ನು ಪ್ರಾರಂಭಿಸಲು ಸಿಬ್ಬಂದಿ ವಾಹನ ಮತ್ತು ಉಪಕರಣಗಳನ್ನು ಮಂಜೂರು ಮಾಡಿದೆ. ಕರ್ನಾಟಕ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯು ಈ ಇಲಾಖೆಯ ಸರ್ವೋತೋಮುಖ ಬೆಳವಣಿಗೆಗೆ ಮತ್ತು ರಾಜ್ಯದ ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ಹಂತ ಹಂತದಲ್ಲಿ ಬರುವ 5 ವರ್ಷಗಳಲ್ಲಿ ಅಗ್ನಿಶಾಮಕ ಠಾಣೆಗಳನ್ನು ಪ್ರಾರಂಭಿಸಲು ಒಂದು ಬೃಹತ್ ಯೋಜನೆಯನ್ನು (K-SAFE 2010) ತಯಾರಿಸಿದು, ಈ ಯೋಜನಯು ಪರಿಶೀಲನೆಯಲ್ಲಿದೆ. ಇದರಂತೆ ಹೊನ್ನಾವರ ತಾಲ್ಲೂಕು ಕೇಂದ್ರದಲ್ಲಿಯೂ ಅಗ್ನಿಶಾಮಕ ಠಾಣೆಯನ್ನು ಪ್ರಾರಂಭಿಸಲಾಗುವುದು.

ಇ) ಅಗ್ನಿಶಾಮಕ ಠಾಣೆಯನ್ನು ಪ್ರಾರಂಭಿಸುವ ಮೊದಲು ನಿವೇಶವನ್ನು ಪಡೆಯಲು ಕ್ರಮ ಕೈಗೊಳ್ಳಲಾಗುವುದು.